


## ವೇಜ್

ಗೂಗ್ಲ್ ಮ್ಯಾಪ್ ಬೇಸರವಾದರೆ ಈ ನ್ಯಾವಿಗೇಷನ್ ಆ್ಯಪ್ ಬಳಸಬಹುದು. ಇದು ಚಾಲಕ ಸ್ನೇಹಿ ಅಂಶಗಳನ್ನು ಹೊಂದಿದೆ. ಬೇರೆ ಚಾಲಕರಿಂದ ಸಂಚಾರ ದಟ್ಟಣೆ, ಅಪಘಾತಗಳ ಸ್ಥಳ ಮೊದಲಾದವುಗಳ ಬಗ್ಗೆ ಮಾಹಿತಿ ಪಡೆಯಬಹುದು. ಇದು ಚಾಲನೆ ಮೇಲೆ ಹೆಚ್ಚು ಲಕ್ಷ್ಯವನ್ನು ನೀಡುತ್ತದೆ. ಪೆಟ್ರೋಲ್ ದರ, ಸಮೀಪದ ಪಾರ್ಕಿಂಗ್ ಸ್ಥಳ ಮೊದಲಾದವುಗಳ ವಿವರವನ್ನೂ ನೀಡುತ್ತದೆ. ಸಾಮಾಜಿಕ ಜಾಲತಾಣವನ್ನೂ ಇದು ಸಂಪರ್ಕಿಸುತ್ತದೆ.

## ಅಮೆಝಾನ್ ಪ್ರೈಮ್ ವಿಡಿಯೊ

ಅಮೆಝಾನ್ ಇಂಡಿಯ ಭಾರತದಲ್ಲಿ ಪ್ರೈಮ್ ವಿಡಿಯೊ ಸೇವೆಯನ್ನು ಆರಂಭಿಸಲಿದ್ದು, ಮಾಸಿಕ ಕೇವಲ 42 ರೂಪಾಯಿ ಪಾವತಿಸಬೇಕಾಗುತ್ತದೆ. ಅದು ಈಗಾಗಲೇ 499 ರೂಪಾಯಿಗೆ ಆರಂಭಿಕ ಸೇವೆ ಒದಗಿಸಿದ್ದು, ಈಗಿರುವ ಬಳಕೆದಾರರಿಗೆ ಮಾತ್ರ ಈ ಹೊಸ ಸೇವೆಯನ್ನು ನೀಡಲಿದೆ. ನೆಟ್‌ಫ್ಲಿಕ್ಸ್‌ನ ಮಾಸಿಕ 499 ರೂಪಾಯಿ ಶುಲ್ಕಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆ ದರವಾಗಿದ್ದು, ವಾರ್ಷಿಕ 999 ರೂಪಾಯಿಗೆ ಕೂಡಾ ಸೇವೆ ಪಡೆಯಬಹುದು. ಇದಕ್ಕಾಗಿ ಅಮೆಝಾನ್ ಕರಣ್ ಜೋಹರ್‌ನ ಧರ್ಮಾ ಪ್ರೊಡಕ್ಷನ್ಸ್, ಟಿ–ಸೀರೀಸ್ ಮೊದಲಾದವುಗಳ ಜೊತೆ ಒಪ್ಪಂದ ಮಾಡಿಕೊಂಡಿದೆ. ಬಾಹುಬಲಿ, ಛೋಟಾ ಭೀಮ್, ಸೂಪರ್ ಭೀಮ್ ಮೊದಲಾದ ಚಿತ್ರಗಳ ಹಕ್ಕನ್ನು ಪಡೆದಿದೆ.




## ಲಾಸ್ಟ್‌ಪಾಸ್ 4.0 ಪ್ರೀಮಿಯಮ್

ಈ ಉಚಿತ ಆ್ಯಪ್‌ನಿಂದ ನಿಮ್ಮ ಎಲ್ಲಾ ಸಾಧನಗಳಿಗೆ ಪಾಸ್‌ವರ್ಡ್ ಸಿಂಕ್ ಮಾಡಬಹುದು. ಪಾಸ್‌ವರ್ಡ್ ಬದಲಾವಣೆ ಸ್ವಯಂಚಾಲಿತವಾಗಿದ್ದು, ಶೇರಿಂಗ್ ಕೂಡಾ ಮಾಡಬಹುದು. ಈಗೀಗ ಪಾಸ್‌ವರ್ಡ್ ಮ್ಯಾನೇಜರ್ ಅನ್ನು ಸ್ಮಾರ್ಟ್‌ಫೋನ್ ಬಳಕೆದಾರರು ಅಳವಡಿಸಿಕೊಳ್ಳುವುದು ಮಾಮೂಲಾಗಿದೆ. ಇದಿಲ್ಲದಿದ್ದರೆ ನೀವು ಸರಳವಾದ ಪಾಸ್‌ವರ್ಡ್ ಅನ್ನು ನೆನಪಿಟ್ಟುಕೊಂಡು ಮೇಲಿಂದ ಮೇಲೆ ಅದನ್ನೇ ಬಳಸಬೇಕಾಗುತ್ತದೆ. ಇಂತಹ ಮ್ಯಾನೇಜರ್‌ಗಳಿಗೆ ಶುಲ್ಕವನ್ನೂ ತೆರಬೇಕಾಗುತ್ತದೆ. ಆದರೆ ಲಾಸ್ಟ್‌ಪಾಸ್‌ನ ಈ ಹೊಸ ಆವೃತ್ತಿ ಉಚಿತವಲ್ಲದೇ ಹಲವು ಹೊಸ ಅಂಶಗಳನ್ನು ಹೊಂದಿದೆ. ನೀವು ಯಾವುದೇ ಭದ್ರತೆಯಿರುವ ಸೈಟ್‌ಗೆ ಲಾಗಿನ್ ಆದರೆ ಲಾಸ್ಟ್‌ಪಾಸ್ ನಿಮ್ಮ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ಸೆರೆ ಹಿಡಿಯುತ್ತದೆ. ಹೊಸ ಖಾತೆಗೆ ಸೈನಪ್ ಮಾಡಿದರೆ ಆ ಮಾಹಿತಿಯನ್ನೂ ಕಾಪಿಟ್ಟುಕೊಂಡು ಬೇರೆ ಸೈಟ್‌ಗಳಿಗೆ ಹೋದಾಗ ಆ ಮಾಹಿತಿಯನ್ನು ತುಂಬುತ್ತದೆ. ಹೊಸದಾದ, ಅತ್ಯಂತ ಬಲವಾದ ಪಾಸ್‌ವರ್ಡ್ ಅನ್ನು ನಿಮಗೆ ಸಲಹೆ ಮಾಡುತ್ತದೆ.







## ಆ್ಯಂಡ್ರಾಯ್ಡ್ ಆಟೊ

ಇದು ಕಾರ್‌ನ ಸೆಂಟ್ರಲ್ ಸ್ಕ್ರೀನ್ ಮೇಲೆ ಡಿಸ್‌ಪ್ಲೇ ಆಗುವಂಥದ್ದು. ಇದರ ಮೂಲಕ ಗೂಗ್ಲ್ ಮ್ಯಾಪ್ ಅನ್ನು ಬಳಸಬಹುದು. ಜೊತೆಗೆ ಹ್ಯಾಂಗೌಟ್ ಮೆಸ್ಸೇಜ್‌ಗಳಿಗೆ ಪ್ರತಿಕ್ರಿಯೆ ತೋರಿಸಬಹುದು. ಇದಕ್ಕಾಗಿ ಆ್ಯಂಡ್ರಾಯ್ಡ್ ಆಟೊ ಸಪೋರ್ಟ್ ಮಾಡುವ ಕಾರನ್ನು ಖರೀದಿಸಬೇಕಾಗುತ್ತದೆ. ನಿಮ್ಮ ಕಾರಿನ ಬ್ಲೂಟೂಥ್‌ಗೆ ಸ್ಮಾರ್ಟ್‌ಫೋನ್ ಸಂಪರ್ಕ ಸಾಧಿಸಿದ ಕೂಡಲೇ ಆಟೊ ಕೂಡಾ ಡಿಸ್‌ಪ್ಲೇ ಆಗುತ್ತದೆ.  ನೀವು ಮೂರನೇ ಪಾರ್ಟಿ ಆ್ಯಪ್‌ಗಳನ್ನೂ ಬಳಸಬಹುದು. ನೀವು ಧ್ವನಿ ಮೂಲಕವೇ ಬೇಡಿಕೆ ಸಲ್ಲಿಸಬಹುದು. ಉದಾಹರಣೆಗೆ 'ಟೇಕ್ ಮಿ ಹೋಂ', 'ಪ್ಲೇ ಮ್ಯೂಸಿಕ್' ಇತ್ಯಾದಿ.

■ ಎಸ್. ತುಂಬೆ